ರಾಜಕುಮಾರ ಇಂದು ಇದ್ದಕ್ಕಿಂದ್ದಂತೆ ಆ ಕಡೆಗೆ ವಾಯು ಸೇವನೆಗಾಗಿ ಬಂದಿದ್ದ. ಆತ ದೂರದಿಂದಲೇ ನೋಡಿ ಈ ಯುವತಿ ಗಾಬರಿಗೊಳಗಾಗಿದ್ದಾಳೆ ಎಂದು ತಿಳಿದುಕೊಂಡ. ಆ ಶಕ್ತಿಯುತ ಕುದುರೆ ಅಲ್ಲಿಯೇ ನಿಂತಿತು. ರಾಜಕುಮಾರ ಕೇಳಿದ, ನೀನು ಯಾರು?

ಬೆದರಿದ ಹರಿಣದ ಹಾಗೆ ವಿಶಾಲವಾದ ಕಣ್ಣು ಬಿಡುತ್ತ ಆಕೆ ಹೇಳಿದಳು, ತೋಟಗಾತಿ.

ನೀನು ಹೂವಿನ ಮಾಲೆಯನ್ನು ಮಾರುವೆಯೇನು?

ಹೌದು.

ಇಲ್ಲಿನ ತೋಟಗಾರ ನಿನ್ನನ್ನು ತಡೆಯುವುದಿಲ್ಲವೇ?

ಇಲ್ಲ, ಇಲ್ಲಿ ಯಾವ ತೋಟಗಾರನೂ ಇಲ್ಲ.

ಇಂದು ನೀನು ಯಾವ ಹೂವಿನ ಮಾಲೆ ಮಾಡಿರುವೆ?

ಇದೇ.... ಈ ಕಾಮಿನಿ ಹೂಗಳ ಮಾಲೆ ಮಾಡುತ್ತಿರುವೆ.

ನಿನ್ನ ಹೆಸರೇನು?

ಕಾಮಿನಿ.....

ಆಹಾ....! ಬಹಳ ಸುಂದರವಾಗಿದೆ. ಈ ಮಾಲೆಯನ್ನು ಕಟ್ಟಿ ಪೂರ್ಣಗೊಳಿಸು. ನಾನು ಹಿಂತಿರುಗಿ ಬಂದು ಇದನ್ನು ಪಡೆದುಕೊಳ್ಳುತ್ತೇನೆ.

ಆ ಸಮಯದಲ್ಲಿ ಭಯಭೀತಳಾಗಿದ್ದರೂ ಆಕೆ ದಿಟ್ಟತನದಿಂದಲೇ ಹೇಳಿದಳು, ಬಿಸಿಲು ಏರಿದ ಮೇಲೆ ಈ ಹೂಗಳ ಸುಗಂಧವೆಲ್ಲ ಕಡಿಮೆಯಾಗಿ ಬಿಡುತ್ತದೆ.

ನಾನು ಶೀಘ್ರವಾಗಿ ಬರುತ್ತೇನೆ ಎನ್ನುತ್ತ ರಾಜಕುಮಾರ ಹೊರಟುಹೋದ.

ತೋಟಗಾತಿ ಹೂವಿನ ಹಾರವನ್ನು ಕಟ್ಟಿ ಪೂರ್ಣಗೊಳಿಸಿದಳು. ಸೂರ್ಯನ ಕಿರಣಗಳು ನಿಧಾನವಾಗಿ ಕೆಂಪು, ಹಳದಿಯಾಗುತ್ತಾ ಕೊನೆಗೆ ಬಿಳಿಮಯ ವಾಗುತ್ತಾ ಹೋದವು. ರಾಜಕುಮಾರ ಹಿಂತಿರುಗಿ ಬರಲೇ ಇಲ್ಲ. ಆಕೆ ರಾಜಕುಮಾರ ಹೋದ ಕಡೆಗೇ ನಡೆಯುತ್ತಾ ಹೋದಳು.

ಆ ಯುವತಿ ಬಹಳ ದೂರವೇನೂ ಹೋಗಿರಲಿಲ್ಲ. ಆ ಹೊತ್ತಿಗೆ ರಾಜಕುಮಾರ ಬೇರೆಯೇ ಮಾರ್ಗವಾಗಿ ಹಿಂತಿರುಗಿ ಆಕೆ ಇದ್ದ ಜಾಗಕ್ಕೆ ಬಂದ. ಯುವತಿಯನ್ನು ಕಾಣದೇ ಜೋರಾಗಿ ಕೂಗಿದ, ಏ! ತೋಟಗಾತಿ.... ತೋಟಗಾತಿ...!

ದೂರದಿಂದ ಕೇಳಿಬರುವ ಕೋಗಿಲೆಯ ಸ್ವರದ ಹಾಗೆ ಆ ಧ್ವನಿ ಯುವತಿಯ ಕಿವಿಗೆ ಕೇಳಿಸಿತ್ತು. ಆಕೆ ಕೂಡಲೇ ಹಿಂತಿರುಗಿ ಬಂದಳು. ಕೈಯಲ್ಲಿ ಕಾಮಿನಿ ಹೂಗಳ ಮಾಲೆ ಹಿಡಿದಿದ್ದ ಆಕೆ ವನಲಕ್ಷ್ಮಿಯ ಹಾಗೆ ಕಾಣಿಸುತ್ತಿದ್ದಳು. ಇದೇ ಮೊದಲ ಬಾರಿಗೆ ಸೌಂದರ್ಯವನ್ನು ಆಸ್ವಾದಿಸುವ ಹಾಗೆ ರಾಜಕುಮಾರ ಆಕೆಯನ್ನು ಕುತೂಹಲದಿಂದ ನೋಡತೊಡಗಿದ. ಕಾಮಿನಿಯು ಆ ಮಾಲೆಯನ್ನು ಆತನ ಕೊರಳಿಗೆ ಹಾಕಿದಳು. ರಾಜಕುಮಾರ ತನ್ನ ರೇಷ್ಮೆ ವಸ್ತ್ರವನ್ನು ತೆಗೆದು ಆಕೆಯ ಕಡೆಗೆ ಎಸೆಯುತ್ತ, ಹೋಗು, ಈ ವಸ್ತ್ರವನ್ನು ಧರಿಸಿಕೊಂಡು ಬಾ.... ಎಂದು ಹೇಳಿದ. ಆಶ್ಚರ್ಯ ಹಾಗೂ ಭಯದೊಂದಿಗೆ ಆಕೆ ಪಕ್ಕದಲ್ಲೇ ಇದ್ದ ಲತೆಗಳ ಪೊದೆಯ ಕಡೆಗೆ ಹೋಗಿ ಆತನ ಆಜ್ಞೆಯಂತೆ ರೇಷ್ಮೆ ವಸ್ತ್ರವನ್ನು ಧರಿಸಿಕೊಂಡು ಬಂದಳು.

ಆಗ ಆಕೆಯ ಅಂಗಾಂಗಗಳ ಮೇಲೆ ಉಜ್ವಲ ಕಿರಣಗಳು ನಗುನಗುತ್ತಾ ನರ್ತಿಸುತ್ತಿದ್ದವು. ರಾಜಕುಮಾರ ನಸುನಗುತ್ತಾ ಹೇಳಿದ, ನೆನಪಿಡು, ಇಂದಿನಿಂದ ನೀನು ಕುಸುಮ ಕಾನನದ ವನಪಾಲಿಕೆಯಾಗಿರುವೆ.

ರಾಜಕುಮಾರ ಹೊರಟು ಹೋದ. ತೋಟಗಾತಿ ಏನು ಮಾಡಬೇಕೆಂದು ತಿಳಿಯದವಳಾಗಿ ಅಲ್ಲಿಯೇ ಇದ್ದ ಹಿಪ್ಪೇಮರದ ಕೆಳಗೆ ಕುಳಿತು ಬಿಟ್ಟಳು.

ಎರಡು ವಸಂತ ಕಳೆದುಹೋಯಿತು. ಬೇಸಿಗೆ ಸುಡು ಸುಡು ಬೇಗೆಯ ನೀಡಿ ಹೊರಟು ಹೋಯಿತು. ಕಾಡು ಹಸಿರಿನಿಂದ ತುಂಬಿ ಹೋಗಿತ್ತು. ಕಪ್ಪು ಮೋಡಗಳು ಆಕಾಶದಲ್ಲಿ ತೇಲುತ್ತ ಸಸ್ಯಶೋಭೆ ಧರಣಿಯ ಮೇಲೆ ತನ್ನ ಸೌಂದರ್ಯದ ಛಾಯೆಯನ್ನು ಹರಡುತ್ತಿದ್ದವು. ಆ ವನಪಾಲಿಕೆಯ ಸುತ್ತ ನವಿಲುಗಳು ಸುತ್ತುವರೆದು ನರ್ತಿಸುತ್ತಿದ್ದವು. ಆ ಸಂಜೆಯ ಹೊತ್ತಿನಲ್ಲಿ ಒಂದು ಉತ್ಸವ ನಡೆಯುತ್ತಿರುವ ಹಾಗೆ ಭಾಸವಾಗುತ್ತಿತ್ತು. ಬೆಳದಿಂಗಳು ಹರಡಿತ್ತು. ವನಪಾಲಿಕೆಯ ಕುಟೀರವನ್ನು ಅಂಧಕಾರ ಆವರಿಸಿಬಿಟ್ಟಿತು. ಅದೇ ಹೊತ್ತಿಗೆ ಧಾರಾಕಾರ ಮಳೆ ಸುರಿಯಲಾರಂಭಿಸಿತು. ವನಪಾಲಿಕೆ ತನ್ನ ಪರ್ಣಕುಟೀರದ ಕಿಂಡಿಯ ಮೂಲಕ ಆಶ್ಚರ್ಯಭರಿತಳಾಗಿ ಹೊರಗೆ ಪ್ರಕೃತಿಯ ಲಾಸ್ಯವನ್ನು ನೋಡುತ್ತಿದ್ದಳು. ಇದ್ದಕ್ಕಿದ್ದ ಹಾಗೆ ಹೊರಗಡೆಯಿಂದ ಭಯಮಿಶ್ರಿತ ಸ್ವರವೊಂದು ತೇಲಿಬಂತು, ಆಶ್ರಯ ಬೇಕಾಗಿದೆ...

ವನಪಾಲಿಕೆ ಕೇಳಿದಳು, ಯಾರು ನೀನು?

ನಾನೊಬ್ಬ ಅಪರಾಧಿ.

ಹಾಗಿದ್ದರೆ ಇಲ್ಲಿ ಆಶ್ರಯ ಸಿಗಲಾರದು.

ಸ್ವಲ್ಪ ಆಲೋಚಿಸಿ ಉತ್ತರ ನೀಡು. ಆಶ್ರಯ ನೀಡದೆ ನಿರಾಕರಿಸಿ ನೀನೂ ಸಹ ಅಪರಾಧಿಯಾಗಬೇಡ.

ವನಪಾಲಿಕೆ ವಿಚಾರ ಮಾಡತೊಡಗಿದಳು. ಆ ವೇಳೆಗೆ ಹೊರಗಿನಿಂದ ಸ್ವರ ಮತ್ತೆ ಕೇಳಿಸಿತು, ವಿಳಂಬ ಮಾಡಿದರೆ ನನ್ನ ಪ್ರಾಣಕ್ಕೇ ತೊಂದರೆ ಇದೆ.

ವನಪಾಲಿಕೆ ಈಗ ಯಾವುದೇ ಸಂಕೋಚವಿಲ್ಲದೆ ಹೋಗಿ ತನ್ನ ಕುಟೀರದ ಬಾಗಿಲು ತೆರೆದಳು. ಆಗಂತುಕ ಒಳಗೆ ಪ್ರವೇಶಿಸಿದ. ಆತನೊಬ್ಬ ಬಲಿಷ್ಠ ಯುವಕನಾಗಿದ್ದ. ಅವನ ಮುಖಾರವಿಂದದಲ್ಲಿ ಸಾಹಸ ಪಡಿಮೂಡಿತ್ತು. ವನಪಾಲಿಕೆ ಕೇಳಿದಳು, ನೀನು ಅದ್ಯಾವ ಅಪರಾಧ ಮಾಡಿರುವೆ?

ಬಹಳ ದೊಡ್ಡ ಅಪರಾಧ ಮಾಡಿದ್ದೇನೆ. ಬೆಳಗಾದ ಮೇಲೆ ಎಲ್ಲವನ್ನೂ ತಿಳಿಸುತ್ತೇನೆ. ಈ ರಾತ್ರಿ ನನಗೆ ಆಶ್ರಯವನ್ನಷ್ಟೇ ಕೊಡು ಎನ್ನುತ್ತ ಆಗಂತುಕ ತನ್ನ ಒದ್ದೆಯಾದ ವಸ್ತ್ರಗಳನ್ನು ಹಿಂಡತೊಡಗಿದ. ಆತನ ಸ್ವರದಲ್ಲಿ ಒಂದು ಥರದ ವಿಕೃತಿಯಿತ್ತು. ಮುಖ ನೀರಸವಾಗಿತ್ತು. ಅಂಧಕಾರವು ಅದನ್ನು ಮತ್ತಷ್ಟು ಅಸ್ಪಷ್ಟವನ್ನಾಗಿ ಮಾಡಿತ್ತು.

ಯುವತಿ ತೋಟಗಾತಿ ಅತ್ಯಂತ ವ್ಯಾಕುಲಳಾಗಿ ಪ್ರಭಾತದ ನಿರೀಕ್ಷೆಗಾಗಿ ಕಾತರಿಸತೊಡಗಿದಳು. ಇದ್ದಕ್ಕಿದ್ದ ಹಾಗೆ ಆ ಯುವಕ ಆಕೆಯ ಕೈಯನ್ನು ಹಿಡಿದನು. ಅವಳು ಗಾಬರಿಗೊಂಡು ಕೇಳಿದಳು, ಅರೇ ಅಪರಾಧಿ, ಇದೇನು ಮಾಡುತ್ತಿರುವೆ?

ಸುಂದರಿ, ನಾನು ಅಪರಾಧಿ. ಈಗ ಅತನ ಸ್ವರ ಪರಿವರ್ತನೆಗೊಂಡಿತ್ತು. ಉನ್ಮತ್ತ ಪ್ರಕೃತಿ ಆ ಕುಟೀರವನ್ನು ಸುತ್ತುವರೆದು ಅಟ್ಟಹಾಸಗೈಯುವಂತಿತ್ತು. ಆತನ ಕರಸ್ಪರ್ಶ ಉನ್ಮಾದಕಾರಿಯಾಗಿತ್ತು. ಹೊರಗೆ ಮಳೆಯ ನೀರು ಕಾಲುವೆಗಳಲ್ಲಿ ರಭಸವಾಗಿ ಹರಿಯುವ ಹಾಗೆ ಆ ಯುವತಿಯ ದಮನಿಗಳಲ್ಲಿ ರಕ್ತ ಸಂಚರಿಸತೊಡಗಿತು. ಯುವಕನ ಸ್ವರ ಈಗ ಸ್ಪಷ್ಟವಾಗಿತ್ತು. ಆದರೆ ಯುವತಿಯ ಕಾಮಭಾವನೆಯ ಕುತೂಹಲ ಭಯದ ರೂಪ ಪಡೆದು ಕೊಂಡಿತು. ಹೊರಗೆ ಆಲಿಕಲ್ಲು ಸಹಿತ ಮಿಂಚು ಕೋರೈಸಿತು. ಸುಂದರಿ ತೋಟಗಾತಿಯ ಇನ್ನೊಂದು ಕೈ ಯುವಕನ ಕುತ್ತಿಗೆಯನ್ನು ಸುತ್ತುವರೆಯಿತು.

ಕತ್ತಲೆ ನಗತೊಡಗಿತು.

* * *

ಬಹಳ ದಿನಗಳು ಸಂದವು. ವರ್ಷಗಳು ಬಂದವು, ಹೋದವು. ಒಂದು ಕಾಲಕ್ಕೆ ನವಿಲು, ಗಿಳಿ, ಕಾಜಾಣಗಳು ಹೂವಿನ ಪೊದೆ, ಲತೆಗಳ ಮೇಲೆ ಬಂದು ವಿಹರಿಸುತ್ತಿದ್ದ ಆ ಕುಸುಮ ಕಾನನ ಈಗ ಕಾಡಿನಂತಾಗಿಬಿಟ್ಟಿದೆ. ಈಗ ರಾಜಕುಮಾರ ಅಲ್ಲಿಗೆ ಬರುತ್ತಿರಲಿಲ್ಲ.

ಆತ ಮಹಾರಾಜನಾಗಿ ಬಿಟ್ಟಿದ್ದಾರೆ. ಆ ಎಲ್ಲಾ ಮೃದು, ಸುಂದರ ಗಿಡ ಲತೆಗಳು ಸೊರಗಿಹೋಗಿವೆ. ವಿಶಾಲಕಾಯ ವೃಕ್ಷಗಳ ದೊಡ್ಡ ದೊಡ್ಡ ರೆಂಬೆಗಳು ಒಣಗಿ ನಿಂತಿವೆ. ಆ ದಟ್ಟ ಕಾಡಿನ ಒಂದು ಮೂಲೆಯಲ್ಲಿ ಪರ್ಣ ಕುಟೀರವಿದೆ. ಅದರಲ್ಲಿ ಒಬ್ಬಳು ಸ್ತ್ರೀ ಹಾಗೂ ಅವಳ ಪುತ್ರ ಇಬ್ಬರು ವಾಸಿಸುತ್ತಾರೆ.

ಇಬ್ಬರೂ ಹಕ್ಕಿಗಳ ಬೇಟೆಯನ್ನು ಮಾಡುತ್ತಾ ಅದರಲ್ಲಿಯೇ ಜೀವನ ಸಾಗಿಸುತ್ತಾರೆ. ಪಕ್ಷಿಗಳನ್ನು ಹಿಡಿದು ಆ ಹುಡುಗ ಜನರಿಗೆ ಮಾರಾಟ ಮಾಡುತ್ತಾನೆ. ಒಮ್ಮೊಮ್ಮೆ ಪ್ರಾಣಿಗಳು, ಜಿಂಕೆಮರಿಗಳನ್ನೂ ಹಿಡಿದು ತರುತ್ತಾನೆ.

ಒಂದು ದಿನ ತೋಟಗಾತಿಯ ಮಗ ಒಂದು ಸುಂದರ ಚಿಗರೆ ಮರಿಯೊಂದನ್ನು ಹಿಡಿದು ಅದನ್ನು ಮಾರಲು ನಗರದ ಕಡೆಗೆ ಹೋದ. ಆ ಚಿಗರೆ ಮರಿಯ ಬೆನ್ನ ಮೇಲೆ ಸುಂದರವಾದ ಚುಕ್ಕೆಗಳಿದ್ದವು. ನೋಡಲು ಬಲು ಸುಂದರವಾಗಿತ್ತು. ರಾಜನ ಪುತ್ರ ತನ್ನ ಕುದುರೆಯನ್ನೇರಿ ತಿರುಗಾಡಲು ಹೊರಟಿದ್ದ. ಆತನ ಹಿಂದೆ ಮುಂದೆ ಅಂಗರಕ್ಷಕರಿದ್ದರು. ಚಿಗರೆಯನ್ನು ನೋಡಿ ರಾಜಕುವರ ಅದಕ್ಕೆ ಮಾರುಹೋದ. ತೋಟಗಾತಿಯ ಮಗ ದುಡ್ಡು ಕೇಳಿದ. ರಕ್ಷಕರು ಏನೋ ಸ್ವಲ್ಪ ಕೊಟ್ಟು ಚಿಗರೆಯನ್ನು ಕಿತ್ತುಕೊಳ್ಳಲು ಮುಂದಾದಾಗ ಈತ ಚಿಗರೆಯ ಹಗ್ಗದ ಕುಣಿಕೆಯನ್ನು ಸಡಿಲ ಮಾಡಿದ. ಕೂಡಲೇ ಅದು ಕುಪ್ಪಳಿಸುತ್ತ ಓಡಿಹೋಯಿತು. ರಾಜಕುವರ ಹಠ ಸ್ವಭಾವದವನಾಗಿದ್ದ.